UASB LIBRARY
Newspaper Clippings



Pg .1 Saturday 20-02-2021 **Jai Kisan**

ಕೃಷಿ ಡಿಪ್ಲೊಮಾದಾರರಿಗೆ ಉದ್ಯೋಗ ಭಾಗ್ಯ

ಸಂ.ಕ.ಸಮಾಚಾರ ಬೀದರ್



ಕೃಷಿ ಡಿಪ್ಲೋಮಾ ಪದವೀಧರರಿಗೆ ಹೊರಗುತ್ತಿಗೆ ಆಧಾರದ ಮೇಲೆ ಕೃಷಿ ಇಲಾಖೆಯ ಸೇವೆಗಳ ಅನುಷ್ಠಾನಕ್ಕಾಗಿ ನಿಯೋಜಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸ್ಂದ್ಗಾರ್ರ್ೂಂದಿಗೆ ಮಾತನಾಡಿದ ಅವರು ಕೃಷಿ ಡಿಪ್ಲೋಮಾ ಪಾಸಾದ ರಾಜ್ಯದಲ್ಲಿನ ಮೂರು ಸಾವಿರ ನಿರುದ್ಯೋಗಿಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ಹತ್ತು ತಿಂಗಳ ಮಟ್ಟಿಗೆ ಉದ್ಯೋಗ ಭಾಗ್ಯ ಸಿಗಲಿದೆ ಎಂದರು.

ಈ ಪದವಿಧರರು ಮೂರು ತಿಂಗಳ ಕಾಲ ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನೆಯ ಅನುಷ್ಠಾನದಲ್ಲಿ ಸೇವೆ ಸಲ್ಲಿಸಿ ಮಿಕ್ಕ ಏಳು ತಿಂಗಳು ಕೃಷಿ ಇಲಾಖೆಯಲ್ಲಿ ಸೇವೆ ಸಲ್ಲಿಸಲಿದ್ದಾರೆ. ಕೃಷಿ ಡಿಪ್ಲೋಮದಾರರಿಗೆ ತಂತ್ರಜ್ಞಾನ ಮಾಹಿತಿ ಇರುವುದರಿಂದ ಮತ್ತು ಆಪ್ ಬಳಕೆಯಲ್ಲಿ ಪ್ರವೀಣರಾಗಿರುವುದರಿಂದ ಅವರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ತೀರ್ಮಾನಿಸಲಾಗಿದೆ ಎಂದರು. ಪ್ರತಿ ಎರಡು ಗ್ರಾಪಂ ಗೆ ತಲಾ ಒಬ್ಬರಂತೆ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಲಾಗುವುದು ಎಂದು ತಿಳಿಸಿದರು.

ಕೃಷಿ ವಿ.ವಿ

ರೈತರ ಮಕ್ಕಳಿಗೆ ಕೃಷಿ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯಲು ನಿಗದಿಪಡಿಸಲಾಗಿರುವ ಸೀಟುಗಳ ಕೋಷ್ಟಕವನ್ನು (ಸೀಟ್ ಮ್ಯಾಟ್ರಿಕ್ಸ್) ಶೇ. 40 ರಿಂದ ಶೇ. 50 ಪ್ರತಿಶತ ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆ ಎಂದರು.

ಕೃಷಿ ಪಂಪ್‌ಸೆಟ್‌ಗಳಿಗೆ ನೀಡಲಾಗುತ್ತಿರುವ ಸಬ್ಸಿಡಿ ಸೌಲಭ್ಯಗಳನ್ನು 25 ಅಶ್ವಶಕ್ತಿ 40 ಅಶ್ವಶಕ್ತಿ ಪಂಪ್‌ಸೆಟ್‌ಗೆ ಹೆಚ್ಚಿಸಲು ಪ್ರಸ್ತಾವನೆಯಲ್ಲಿದೆ. ರೈತರು ಆಕಸ್ಮಿಕ ಮರಣ ಹೊಂದಿದಲ್ಲಿ ದುಃಖಿತಪ್ತ ಕುಟುಂಬಕ್ಕೆ ನೀಡಲಾಗುವ ಪರಿಹಾರ ಮೊತ್ತ 2 ಲಕ್ಷದಿಂದ 5 ಲಕ್ಷಕ್ಕೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ ಎಂದರು. ಬೀದರ್ ಜಿಲ್ಲೆಗೆ ಪದವಿ ಕಾಲೇಜು ಬೇಕಾಗಿದೆ ಎಂಬುವುದು ಒಪ್ಪಿಕೊಂಡ ಕೃಷಿ ಸಚಿವರು ಮುಖ್ಯಮಂತ್ರಿಗಳ ಅವಗಾಹನೆಗೆ ಈ ವಿಷಯ ತರಲಾಗುವುದು ಎಂದು ತಿಳಿಸಿದರು.

20-02-2021 Sk Pg 09

For more information visit
University Library Website
Web - uasbagrilibindia.org
E-mail- librarian@uasbangalore.edu.in

ಕೃಷಿ ಗ್ರಂಥ ಪಾಲಕರ ಸಮ್ಮೇಳನ

ಬೆಂಗಳೂರು: ಭಾರತದ ಕೃಷಿ ಗ್ರಂಥಪಾಲಕರು ಮತ್ತು ದಾಖಲೆಗಾರರ ಸಂಘವು ತನ್ನ ಸುವರ್ಣ ಮಹೋತ್ಸವದ ಅಂಗವಾಗಿ ಪ್ರಥಮ ಬಾರಿಗೆ ಫೆ.25, 26ರಂದು ಕೃಷಿ ಗ್ರಂಥ ಪಾಲಕರ ಹಾಗೂ ಬಳಕೆದಾರ ಸಮುದಾಯದ ಅಂತಾರಾಷ್ಟ್ರೀಯ ಸಮ್ಮೇಳನ ಹಮ್ಮಿಕೊಂಡಿದೆ. ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಸಮ್ಮೇಳನ ನಡೆಯಲಿದೆ. 'ಅಂತರ್ಜಾಲ ವಿದ್ಯುನ್ಮಾನ ಪರಿಸರದಲ್ಲಿ ಜ್ಞಾನ ಸಂಪನ್ಮೂಲಗಳ ನಿರ್ವಹಣೆ: ಪ್ರವೃತ್ತಿಗಳು, ಸವಾಲುಗಳು ಹಾಗೂ ಅವಕಾಶಗಳು' ಎಂಬ ಶೀರ್ಷಿಕೆಯಡಿ ಸಮ್ಮೇಳನ ಆಯೋಜಿಸಲಾಗಿದೆ.

20-02-2021 Vk Pg 04

ಕೃಷಿ ವಿವಿ ಶೇ.50 ಸೀಟು ರೈತರ ಮಕ್ಕಳಿಗೆ ಮೀಸಲು

ಬೀದರ್: ಕೃಷಿ ವಿಶ್ವವಿದ್ಯಾಲಯದಲ್ಲಿ ರೈತರ ಮಕ್ಕಳಿಗೆ ಶೇ.40ರಷ್ಟು ಸೀಟುಗಳ ಮೀಸಲನ್ನು ಶೇ.50ಕ್ಕೆ ಹೆಚ್ಚಿಸಲು ಪ್ರಸ್ತಾವನೆ ಸಲ್ಲಿಸಲಾಗಿದ್ದು, ಬಜೆಟ್‌ನಲ್ಲಿ ಘೋಷಿಸಲಾಗುತ್ತದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದರು.



3,000 ಹುದ್ದೆಗಳ ನೇಮಕಕ್ಕೆ ನಿರ್ಧಾರ

ತಾಲೂಕಿನ ಜನವಾಡಾ ಸಮೀಪದ ಕೃಷಿ ವಿಜ್ಞಾನ ಕೇಂದ್ರಕ್ಕೆ ಶುಕ್ರವಾರ ಸಂಜೆ ಭೇಟಿ ನೀಡಿದ ಅವರು, ಗೋ ಪೂಜೆ ನೆರವೇರಿಸಿ ಸುದ್ದಿಗಾರರೊಂದಿಗೆ ಮಾತನಾಡಿದರು. ''ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ರಾಜ್ಯಾದ್ಯಂತ 3,000 ಡಿಪ್ಲೋಮಾ ಉತ್ತೀರ್ಣರಾದವರನ್ನು 10 ತಿಂಗಳ ಅವಧಿಗೆ ಹೊರ ಗುತ್ತಿಗೆಯಾಧಾರದ ಮೇಲೆ ನೇಮಿಸಿಕೊಳ್ಳಲು ನಿರ್ಧರಿಸಲಾಗಿದೆ. 3 ತಿಂಗಳ ಕಾಲ ಬೆಳೆ ಸಮೀಕ್ಷೆ ನಡೆಸುವ ಇವರು, ಇನ್ನೂಳಿದ 7 ತಿಂಗಳ ಕೃಷಿ ಇಲಾಖೆಯ ಯೋಜನೆಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಲಿದ್ದಾರೆ. ಈ ನೇಮಕಾತಿ ಕುರಿತು ಪ್ರಸ್ತಾವನೆ ಸಲ್ಲಿಸಲಾಗಿದ್ದು, ಶೀಘ್ರವೇ ಅನುಮತಿ ದೊರಕಲಿದೆ,'' ಎಂದರು.

ಯೋಜನೆ ಕೈಬಿಡಲ್ಲ: ಪ್ರಸಕ್ತ ಬಜೆಟ್‌ನಲ್ಲಿ ಕೃಷಿ ಇಲಾಖೆಗೆ ಸಂಬಂಧಿಸಿದ ಯಾವ ಯೋಜನೆಯನ್ನು ಕೈ ಬಿಡುವುದಿಲ್ಲ. ಕೃಷಿ ಪಂಪ್‌ಸೆಟ್‌ಗಳಿಗೆ ನೀಡಲಾಗುತ್ತಿದ್ದ ಶೇ.25ರಷ್ಟು ಸಬ್ಸಿಡಿಯನ್ನು ಶೇ.40ಕ್ಕೆ ಹೆಚ್ಚಿಸಲಾಗುವುದು. ಕೃಷಿ ಕೆಲಸದ ವೇಳೆ ಆಕಸ್ಮಿಕವಾಗಿ ಮೃತಪಡುವವರಿಗೆ ನೀಡಲಾಗುವ ಪರಿಹಾರವನ್ನು 2 ಲಕ್ಷದ ಬದಲಿಗೆ 5 ಲಕ್ಷಕ್ಕೆ ಹೆಚ್ಚಿಸಲಾಗುವುದು,'' ಎಂದರು.

20-02-2021 Vk Pg 03

UASB LIBRARY
Newspaper Clippings
Pg .2 Saturday 20-02-2021 Jai Kisan



ಹೂವಿನಲ್ಲಿ ಮಾವಿನ ಅಂದಾಜು ನೋಡು..

■ ಪಂಕಜ ಕೆ.ಎಂ. ಬೆಂಗಳೂರು

ರಾಜ್ಯದಲ್ಲಿ ಈ ವರ್ಷ ಮಾವು ಬೆಳೆ ಭರ್ಜರಿಯಾಗಿರಲಿದ್ದು, ಏಪ್ರಿಲ್‌ನಲ್ಲಿ ಮಾರುಕಟ್ಟೆಗೆ ಪ್ರವೇಶವಾಗಲಿದೆ. ಬಾದಾಮಿ, ಸೇಂದೂರ, ನೀಲಂ, ಮಲ್ಲಿಕಾ, ಮಲಗೋಬ, ತೋತಾಪುರಿ ಸೇರಿ ಎಲ್ಲ ತಳಿಯ ಮಾವಿನ ಮರಗಳಲ್ಲೂ ಯಥೇಚ್ಛವಾಗಿ ಹೂ ಬಿಟ್ಟಿದ್ದು, ರೈತರ ಮೊಗದಲ್ಲಿ ಸಂತಸ ಮೂಡಿಸಿದೆ.

» ರಾಜ್ಯದಲ್ಲಿ ಮಾವಿನ ಬೆಳೆ ಭರ್ಜರಿ ನಿರೀಕ್ಷೆ

ಆಕಾಲಿಕ ಮಳೆಯಿಂದ ಹೂ ಉದುರುವ ಆತಂಕವೂ ಕಾಡಿದೆ. ಕಳೆದ ವರ್ಷ ಕೇವಲ 7 ಲಕ್ಷ ಟನ್ ಮಾವು ಬೆಳೆಯಾಗಿತ್ತು. ಈ ಬಾರಿ 14 ಲಕ್ಷ ಟನ್ ಬೆಳೆಯ ನಿರೀಕ್ಷೆ ಹೊಂದಲಾಗಿದೆ.

16 ಜಿಲ್ಲೆಗಳಲ್ಲಿ ಬೆಳೆ: ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಮಾವು ಬೆಳೆಯಲಾಗುತ್ತದೆ. ಪ್ರಮುಖವಾಗಿ ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು (ರಸಪುರಿ, ಕೇಸರಿ, ತೋತಾಪುರಿ ಹೆಚ್ಚು) ಧಾರವಾಡ, ಹಾವೇರಿ, ಗದಗ, ಬೆಳಗಾವಿ, ಕೊಪ್ಪಳ (ಬಾದಾಮಿ ತಳಿ ಅಪೂಸ್, ಮಲಗೋಬ, ರಸಪುರಿ ಹೆಚ್ಚು) ಸೇರಿ 16 ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾವು ಬೆಳೆಯಲಾಗುತ್ತದೆ. ರಾಜ್ಯದಲ್ಲಿ ಒಟ್ಟಾರೆ 1.67 ಲಕ್ಷ ಹೆಕ್ಟೇರ್‌ನಲ್ಲಿ ಮಾವು ಬೆಳೆಯಲಾಗುತ್ತಿದೆ.



ರಫ್ತಿಗೂ ಕರೊನಾ ಎಫೆಕ್ಟ್

ರಾಜ್ಯದ ಮಾವಿಗೆ ಮಧ್ಯಪೂರ್ವ ದೇಶಗಳು, ಐರೋಪ್ಯ, ಆಸ್ಟ್ರೇಲಿಯಾ, ಅಮೆರಿಕ ಸೇರಿ ಹೊರ ದೇಶಗಳಿಂದಲೂ ಹೆಚ್ಚಿನ ಬೇಡಿಕೆ ಇದೆ. ಈಗಾಗಲೆ ಹಣ್ಣುಗಳಿಗೆ ಬೇಡಿಕೆ ಸಹ ಬಂದಿದೆ. ಆದರೆ ಕರೊನಾದಿಂದಾಗಿ ವಿಮಾನ ದರ ಹೆಚ್ಚಳವಾಗಿದ್ದು, ಇದರ ಪರಿಣಾಮ ಮಾವು ರಫ್ತಿನ ಮೇಲೂ ಆಗುವ ಸಾಧ್ಯತೆಗಳಿವೆ.

ಯಾವುದಕ್ಕೆ ಎಷ್ಟು ಬಳಕೆ: ರಾಜ್ಯದ ಒಟ್ಟಾರೆ ಮಾವು ಬೆಳೆಯಲ್ಲಿ ಶೇ.35 ಸ್ಥಳೀಯವಾಗಿ ಬಳಕೆಯಾದರೆ, ಶೇ.35 ಹೊರ ರಾಜ್ಯಗಳಿಗೆ ರಫ್ತಾಗುತ್ತದೆ. ಶೇ.15 ಕೊಯ್ಲಿನಿಂದ ಹಾಳಾಗುತ್ತದೆ. ಶೇ.5 ಜ್ಯೂಸ್, ಜಾಮ್, ಉಪ್ಪಿನಕಾಯಿಗೆ ಬಳಕೆಯಾಗುತ್ತದೆ. ಉಳಿದಂತೆ ಶೇ.10 ಹೊರ ದೇಶಗಳಿಗೆ ರಫ್ತಾಗಲಿದೆ.

ಏಪ್ರಿಲ್‌ನಲ್ಲಿ ಮಾರುಕಟ್ಟೆಗೆ

ಏಪ್ರಿಲ್‌ನಲ್ಲಿ ಮಾರುಕಟ್ಟೆಗಳಿಗೆ ನಾನಾ ತಳಿಯ ಮಾವು ಪ್ರವೇಶಿಸಲಿವೆ. ಜೂನ್, ಜುಲೈವರೆಗೆ ಹಣ್ಣು ದೊರೆಯಲಿವೆ. ರಾಜ್ಯದಲ್ಲಿ ಸೀಸನ್ ಮುಗಿದ ಬಳಿಕ ಉತ್ತರ ಪ್ರದೇಶ (ದಶೇರಿ ತಳಿ), ಆಂಧ್ರ ಪ್ರದೇಶ (ಬಂಗನ್‌ಪಲ್ಲಿ ಮತ್ತು ನೀಲಂ), ತಮಿಳುನಾಡಿನಿಂದ (ರಸಪುರಿ) ಮಾವು ರಾಜ್ಯಕ್ಕೆ ಬರಲಿದ್ದು, ಜುಲೈನಿಂದ ಆಗಸ್ಟ್‌ವರೆಗೆ ದೊರೆಯಲಿವೆ.

ರೈತರಿಗೆ ತರಬೇತಿ ಕರ್ನಾಟಕ ಮಾವು ಅಭಿವೃದ್ಧಿ ಮಂಡಳಿಯ ತಾಂತ್ರಿಕ ಸಮಿತಿ ವತಿಯಿಂದ ಮಾವು ಬೆಳೆಗಾರರಿಗೆ ತೀಟ ಮತ್ತು ರೋಗ ಭಾದೆ ನಿಯಂತ್ರಿಸಲು ಹಾಗೂ ನಿಪಾರಿಸಲು ಆಗಸ್ಟ್ ತರಬೇತಿ ಜತೆಗೆ ಔಷಧ ಸಿಂಪಡಣಾ ಡ್ರೋಣ್ ನೀಡಲಾಗಿದೆ. ಬೆಳೆ ಕೈಕೀಲಿದ ನಂತರ ಸೂಕ್ತ ದರ ಪಡೆಯಲು ಅನುವಾಗುವಂತೆ ಎಪಿಎಂಸಿ, ಖರೀದಿದಾರರ ಒಳಗೊಂಡಂತೆ ಮಾರುಕಟ್ಟೆ ವ್ಯವಸ್ಥೆಯ ಬಗ್ಗೆಯೂ ಮಾಹಿತಿ ನೀಡಲಾಗಿದೆ ಎಂದು ಮಂಡಳಿ ನಿರ್ದೇಶಕ ಕೆ.ವಿ.ನಾಗರಾಜ್ ತಿಳಿಸಿದ್ದಾರೆ.

20-02-2021 Vv Pg 6B

ಹಿಂಗಾರು ಬೆಳೆಗೆ ಆಲಿಕಲ್ಲೇಟು

ರಾಜ್ಯದಲ್ಲಿ ಭಾರಿ ಮಳೆ | ಕೊಚ್ಚಿಹೋಯ್ತು ಫಸಲು | ಅನ್ನದಾತ ಕಂಗಾಲು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದ ವಿವಿಧೆಡೆ ಆಕಾಲಿಕ ಮಳೆಯ ಆರ್ಭಟ ತೀವ್ರಗೊಂಡಿದ್ದು, ಹಿಂಗಾರು ಕೊಯ್ಲಿಗೆ ಸಿದ್ಧತೆ ನಡೆಸಿದ್ದ ರೈತರಿಗೆ ಸಂಕಷ್ಟ ತಂದಿದೆ. ಶುಕ್ರವಾರ ಹಾಸನ, ಕೊಡಗು ಜಿಲ್ಲೆಯ ಹಲವೆಡೆ ಹಿಮಪಾತದಂತೆ ಆಲಿಕಲ್ಲು ಸುರಿದರೆ, ಚಿತ್ರದುರ್ಗ, ಯಾದಗಿರಿ ಜಿಲ್ಲೆಯಲ್ಲಿ ಭಾರಿ ಮಳೆಯಿಂದಾಗಿ ಸಾವಿರಾರು ಎಕರೆ ಕೃಷಿಭೂಮಿ ಜಲಾವೃತಗೊಂಡಿದೆ. ಪರಿಣಾಮ ಕೈಗೆ ಬಂದ ಬೆಳೆ ಹಾನಿಗೀಡಾಗಿದ್ದರಿಂದಾಗಿ ಅನ್ನದಾತರು ಕಂಗಾಲಾಗಿದ್ದಾರೆ. ಇನ್ನೂ 3 ದಿನ ಮಳೆ ಮುಂದುವರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಹೇಳಿದೆ. ರಾಜ್ಯದ ಬಹುತೇಕ ಕಡೆ ಹಿಂಗಾರು ಕೊಯ್ಲಿಗೆ ರೈತರು ಸಿದ್ಧತೆ ನಡೆಸಿದ್ದರು.

» ಕೊಡಗಿನಲ್ಲಿ ಹಿಮಪಾತದ ಅನುಭವ

ಆದರೆ ದಿಢೀರ್ ಮಳೆ ರೈತರ ಲೆಕ್ಕಾಚಾರವನ್ನು ಬುಡಮೇಲು ಮಾಡಿದೆ. ತೋಟಗಾರಿಕೆ ಬೆಳೆಗಾರರು ಮಳೆಯಿಂದಾಗಿ ತೀವ್ರ ನಷ್ಟ ಅನುಭವಿಸಿದ್ದಾರೆ.

ರಾತ್ರಿ ಆಲಿಕಲ್ಲು: ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಕನಿವಾನಗಳಲ್ಲಿ ಭಾಗದಲ್ಲಿ ಶುಕ್ರವಾರ ಗುಡುಗು-ಸಿಡಿಲು ಸಹಿತ ಭಾರಿ ಆಲಿಕಲ್ಲು ಮಳೆಯಾಗಿದೆ. 45 ನಿಮಿಷ ಸುರಿದ ಮಳೆಯಿಂದಾಗಿ ರಸ್ತೆ, ಮನೆಯ ಅಂಗಳಗಳಲ್ಲಿ ಆಲಿಕಲ್ಲಿನಿಂದ ತುಂಬಿ ಹಾಲ್ಮೊರೆಯಂತೆ ಕಂಡು ಬಂತು. ಅಂಕನಹಳ್ಳಿ-ಕನಿವಾನಗಳ ಮುಖ್ಯರಸ್ತೆ ಮೇಲೆ ರಾಶಿಯಾಗಿ ಆಲಿಕಲ್ಲು ಬಿದ್ದಿದ್ದರಿಂದ ವಾಹನಗಳ ಸಂಚಾರ ಕೆಲಕಾಲ ಸ್ಥಗಿತಗೊಂಡಿತ್ತು. ಅಲ್ಲದೆ ಜೋಳ ಆಲಿಕಲ್ಲು ಮಳೆಯಿಂದ ಮನೆಗಳ ಹೆಂಚುಗಳೂ ಹಾನಿಯಾಗಿದೆ.

ಎಲ್ಲೆಲ್ಲಿ ಮಳೆ: ಕೊಡಗು, ಹಾಸನ, ಚಿತ್ರದುರ್ಗ, ಬೆಂಗಳೂರು, ಹುಬ್ಬಳ್ಳಿ, ಕಾರವಾರ, ಯಾದಗಿರಿ, ಮಂಗಳೂರು, ಚಿಕ್ಕಮಗಳೂರು, ತುಮಕೂರು, ರಾಮನಗರ, ಬೆಳಗಾವಿ.

● ಮತ್ತಷ್ಟು ವಿವರ ಪುಟ 9



ಕೊಡಗು ಜಿಲ್ಲೆ ಕನಿವಾನಗಂತೆಯ ಅಂಕನಹಳ್ಳಿಯಲ್ಲಿ ಅಲಿಕಲ್ಲು ರಾಶಿ.



ಭಾರಿ ಮಳೆಗೆ ಕೋಡಿ ಬಿದ್ದಿರುವ ಚಿತ್ರದುರ್ಗದ ಮಲ್ಲಾಪುರ ಕೆರೆ.

ಮಳೆ ಹಾನಿಯ ವಿವರ

- ಕೊಡಗಿನ ಕನಿವಾನಗಂತೆ ಭಾಗದಲ್ಲಿ ಅಲಿಕಲ್ಲು ಬದ್ದು ಮನೆಯ ಹೆಂಚುಗಳಿಗೆ ಹಾನಿ
- ಚಿತ್ರದುರ್ಗದಲ್ಲಿ 40ಕ್ಕೂ ಅಧಿಕ ಮನೆ, ನೂರಾರು ಎಕರೆ ಬೆಳೆ ಹಾನಿ
- ಕೊಪ್ಪಿಗೆ ಬಂದ ಸಾವಿರಾರು ಹೆಕ್ಟೇರ್ ಬೆಳೆ ಹಾನಿ ಆತಂಕ
- ಹೊಸದುರ್ಗ ತಾಲೂಕಿನಲ್ಲಿ 110 ಎಕರೆ ಆಡಕೆ, ತೆಂಗು, ಬಾಳೆ ನೀರುಪಾಲು, ಹಲವು ಮನೆಗಳು ಜಲಾವೃತ



ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನಲ್ಲಿ ಮೆಣಸಿನಕಾಯಿ ಜಲಾವೃತವಾಗಿರುವುದು.

ನೂರಾರು ಎಕರೆ ಬೆಳೆ ಹಾನಿ

ಚಿತ್ರದುರ್ಗ ಜಿಲ್ಲೆಯಲ್ಲಿ ಗುರುವಾರ ಸುರಿದ ಮಳೆಯಿಂದ ನೂರಾರು ಎಕರೆ ಕೋಟದ ಬೆಳೆ, ಆರು ಮನೆ ಹಾನಿಗೀಡಾಗಿವೆ. 40ಕ್ಕೂ ಅಧಿಕ ಮನೆಗಳಿಗೆ ನೀರು ನುಗ್ಗಿದೆ. ಮಧ್ಯರಾತ್ರಿ 1ಗಂಟೆಗೆ ಆರಂಭವಾದ ಮಳೆ, ಶುಕ್ರವಾರ ಬೆಳಗ್ಗೆ 9 ಗಂಟೆವರೆಗೂ ಸುರಿಯಿತು. ಚಿತ್ರದುರ್ಗದಲ್ಲಿ 96.8 ಮಿ.ಮೀ. ಮಳೆಯಾಗಿದೆ. ಕೊಪ್ಪಿಗೆ ಬಂದ ಸಾವಿರಾರು ಹೆಕ್ಟೇರ್ ಕಡಲೆಕಾಳು ಬೆಳೆಗೆ ಹಾನಿಯ ಆತಂಕ ಎದುರಾಗಿದೆ. ಹೊಸದುರ್ಗ ತಾಲೂಕಿನಲ್ಲಿ 110 ಎಕರೆ ಆಡಕೆ, ತೆಂಗು, ಬಾಳೆ ಬೆಳೆಗಳು ನಷ್ಟಕ್ಕೀಡಾಗಿವೆ. ಚರಂಡಿ ಕಟ್ಟಿಕೊಂಡಿದ್ದರಿಂದ ಹಲವೆಡೆ ಮನೆಗಳಿಗೆ ನೀರು ನುಗ್ಗಿದೆ. ತರಕಾರಿ, ಹೂವನ್ನು ಚಿತ್ರದುರ್ಗಕ್ಕೆ ತಂದಿದ್ದ ರೈತರು ಗ್ರಾಮಕ್ಕೆ ಹಿಂದಿರುಗಲು ಪರದಾಡಿದರು. ಮಲ್ಲಾಪುರ ಕೆರೆ ಮತ್ತೆ ಕೋಡಿ ಬಿದ್ದಿದೆ.

20-02-2021 Vv Pg 01

ಜಿಲ್ಲೆಗೊಂದು 'ಫುಡ್ ಪಾರ್ಕ್' ಸ್ಥಾಪನೆಗೆ ಚಿಂತನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಜಿಲ್ಲೆಗೊಂದು 'ಫುಡ್ ಪಾರ್ಕ್' ನಿರ್ಮಿಸಬೇಕೆಂದು ಕೈಗಾರಿಕೋದ್ಯಮಿಗಳು ಬೇಡಿಕೆ ಇಟ್ಟಿದ್ದಾರೆ. ಈ ಕುರಿತು ಚಿಂತನೆ ನಡೆಸಿದ್ದು, ಮುಖ್ಯಮಂತ್ರಿ ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸುತ್ತೇನೆ' ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ತಿಳಿಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಗುರುವಾರ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

'ಕೃಷಿಯನ್ನು ರೈತೋದ್ಯಮ ಮಾಡುವುದು ನಮ್ಮ ಕನಸು. ಇದು ಸಾಕಾರಗೊಳ್ಳಬೇಕಾದರೆ ಎಫ್‌ಕೆಸಿಸಿಐ ನಮ್ಮ ಜೊತೆ ಕೈಜೋಡಿಸಬೇಕು. ಯುವ ಸಮುದಾಯ ನಗರಗಳತ್ತ ವಲಸೆ ಹೋಗುತ್ತಿದೆ. ಹೀಗಾಗಿ ಹಳ್ಳಿಗಳ ವೃದ್ಧಾಶ್ರಮಗಳಾಗಿ ಪರಿವರ್ತನೆಗೊಳ್ಳುತ್ತಿವೆ. ಕೃಷಿಯನ್ನು ಲಾಭದಾಯಕಗೊಳಿಸುವ ಮೂಲಕ ಯುವಕರು ಕೃಷಿಯಿಂದ ವಿಮುಖರಾಗದಂತೆ ತಡೆಯಬೇಕಿದೆ' ಎಂದರು.

'ರೈತರಿಗೆ ಆಹಾರ ಸಂಸ್ಕರಣೆ ಮತ್ತು ಮಾರುಕಟ್ಟೆ ತರಬೇತಿ ನೀಡಲು ಮುಂದಾಗಿದ್ದೇವೆ. ಮೈಸೂರಿನಲ್ಲಿ ನಡೆಯುತ್ತಿರುವ ತರಬೇತಿ ಕಾರ್ಯಕ್ರಮದಲ್ಲಿ ಪ್ರತಿ ವಾರ ಪ್ರತಿ ಜಿಲ್ಲೆಯಿಂದ 50 ಮಂದಿ ರೈತರು ಭಾಗವಹಿಸುತ್ತಿದ್ದಾರೆ' ಎಂದು ತಿಳಿಸಿದರು.

'ಹಾಲು ಉತ್ಪಾದಕರ ಸಹಕಾರ ಸಂಘಗಳ ಮಾದರಿಯಲ್ಲಿ ಪ್ರತಿ ಗ್ರಾಮದಲ್ಲೂ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು ಸ್ಥಾಪನೆಯಾಗಬೇಕು. ಕೋವಿಡ್ ಸಮಯದಲ್ಲಿ ಅನೇಕ ಯುವಕರು ನಗರಗಳಿಂದ ಹಳ್ಳಿಗಳಿಗೆ ಹೋಗಿ ನೆಲೆಸಿದ್ದಾರೆ. ಅಂತಹವರು ಇಂತಹ ಸಂಘಗಳಲ್ಲಿ ಸಕ್ರಿಯರಾಗಬೇಕು. ಹಾಗಾದಲ್ಲಿ ರೈತರ ಆದಾಯ ದ್ವಿಗುಣಗೊಳಿಸಬಹುದು' ಎಂದು ಹೇಳಿದರು.

'ನವೆಂಬರ್‌ನಲ್ಲಿ 'ರೈತರೊಂದಿಗೆ ಒಂದು ದಿನ' ಎಂಬ ಕಾರ್ಯಕ್ರಮ ಶುರುಮಾಡಿದ್ದೆವು. ಇದಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಈ ಕಾರ್ಯಕ್ರಮದ ಭಾಗವಾಗಿ ಪ್ರತಿ ಜಿಲ್ಲೆಗೂ ಭೇಟಿ ನೀಡಿ ಆಧುನಿಕ ಕೃಷಿ ಪದ್ಧತಿಗಳು, ಆಹಾರ ಸಂಸ್ಕರಣೆ ಹಾಗೂ ಇನ್ನಿತರ ವಿಷಯಗಳ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ' ಎಂದು ನುಡಿದರು.

ವಿಧಾನ ಪರಿಷತ್ ಸದಸ್ಯ ವೈ.ಎ.ನಾರಾಯಣ ಸ್ವಾಮಿ, ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕಲ್ ಎಂ.ಸುಂದರ್ ಹಾಗೂ ಇತರರು ಇದ್ದರು.

ಎಲ್ಲಿದೆರೀ ಕೋವಿಡ್...

ಸಂವಾದದ ವೇಳೆ ಸಚಿವರು ಕರವಸ್ತ್ರದಿಂದ ಪದೇ ಪದೇ ಮುಖ ಒರೆಸಿಕೊಳ್ಳುತ್ತಿದ್ದರು. ಕೊಠಡಿಯಲ್ಲಿದ್ದ ಎ.ಸಿ.ಕೆಲಸ ಮಾಡುತ್ತಿಲ್ಲ ಎಂಬುದನ್ನು ಮನಗಂಡ ಅವರು ಎ.ಸಿ. ಹಾಕಿಲ್ವಾ ಎಂದು ಕೇಳಿದರು. ಈ ವೇಳೆ ಮಧ್ಯಪ್ರವೇಶಿಸಿದ ನಾರಾಯಣ ಸ್ವಾಮಿ 'ಕೋವಿಡ್ ಇದೆಯಲ್ಲ ಸರ್' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಪಾಟೀಲ 'ಎಲ್ಲಿದೆರೀ ಕೋವಿಡ್. ಜೀರಿಗೆ, ಅರಿಶಿಣ ತಿನ್ನೋರಿಗೆ ಕೋವಿಡ್ ಬರಲ್ಲ' ಎಂದರು.

20-02-2021 Pv Pg 3C

ಬೆಳೆಗಾರರಿಗೆ ಸ್ಥಳೀಯವಾಗಿ ಮಾರುಕಟ್ಟೆ ಕಲ್ಪಿಸಲು ಮುಂದಾದ ರಾಜ್ಯ ಮಾವು ಅಭಿವೃದ್ಧಿ ನಿಗಮ

ಜಿಲ್ಲಾವಾರು 'ಮಾವು ಮೇಳ'ಕ್ಕೆ ಚಿಂತನೆ

G.K.V.K. CAMPUS

● ಮನೋಹರ್ ಎಂ.

ಬೆಂಗಳೂರು: ಮಾವು ಬೆಳೆಗಾರರಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು ಹಾಗೂ ಗ್ರಾಹಕರಿಗೆ ಮಾವು ತಲುಪಿಸುವ ಉದ್ದೇಶದಿಂದ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ 'ಮಾವು ಮೇಳ' ಆಯೋಜಿಸಲು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ಕೆಎಸ್‌ಎಂಡಿಎಂಸಿ) ಚಿಂತನೆ ನಡೆಸಿದೆ.

ನಿಗಮವು ಮಾವು ಬೆಳೆಗಾರರಿಗೆ ನೇರ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಪ್ರತಿವರ್ಷ ಮೇ ಅಥವಾ ಜೂನ್ ತಿಂಗಳಿನಲ್ಲಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಮಾವು ಮೇಳ ಆಯೋಜಿಸುತ್ತಿತ್ತು. ಈಗ ಬೆಳೆಗಾರರಿಗೆ ಸ್ಥಳೀಯವಾಗಿ ಮಾರುಕಟ್ಟೆ ಕಲ್ಪಿಸಲು ಜಿಲ್ಲಾವಾರು ಮೇಳ ಏರ್ಪಡಿಸಲು ಮುಂದಾಗಿದೆ.

'ಈ ವರ್ಷ ಹೆಚ್ಚಿನ ಪ್ರಮಾಣದ ಮಾವು ಇಳುವರಿ ನಿರೀಕ್ಷಿಸಿದ್ದೇವೆ. ಮಾವು ಮೇಳದ ಮೂಲಕ ಎಲ್ಲ ಜಿಲ್ಲೆಗಳಲ್ಲಿನ ಮಾವು ಪ್ರಿಯರಿಗೆ ತರಹೇವಾರಿ ಮಾವಿನ ತಳಿಗಳನ್ನು ಪರಿಚಯಿಸುವ ಹಾಗೂ ತಲುಪಿಸುವ ಉದ್ದೇಶ ಹೊಂದಿದ್ದೇವೆ. ಮಾರ್ಚ್ ಕೊನೆಯ ವಾರ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ಜಿಲ್ಲಾವಾರು ಮಾವು ಮೇಳ ಆಯೋಜಿಸಲು ಯೋಜನೆ ರೂಪಿಸಿದ್ದೇವೆ' ಎಂದು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಅಧ್ಯಕ್ಷ ಕೆ.ವಿ.ನಾಗರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.



ಸಾಂದರ್ಭಿಕ ಚಿತ್ರ

ರಾಜ್ಯದಲ್ಲಿ ಬೆಳೆಯುವ ಮಾವಿಗೆ ಯುರೋಪ್ ಹಾಗೂ ಗಲ್ಫ್ ದೇಶಗಳಿಂದ ಬೇಡಿಕೆ ಹೆಚ್ಚಿದೆ. ಮಾವು ರಫ್ತಿನಲ್ಲೂ ರಾಜ್ಯ ಅಭಿವೃದ್ಧಿ ಕಾಣಲಿದೆ. ಕೆ.ವಿ.ನಾಗರಾಜ್, ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಅಧ್ಯಕ್ಷ

'ಜಿಲ್ಲಾ ಮಟ್ಟದಲ್ಲಿ ಮೇಳ ಆಯೋಜನೆಗೆ ನಿಗಮ, ತೋಟಗಾರಿಕೆ ಇಲಾಖೆ ಹಾಗೂ ರೈತ ಉತ್ಪಾದಕ ಸಂಘಗಳು (ಎಫ್‌ಪಿಒ) ಕೈಜೋಡಿಸಲಿವೆ. ಗ್ರಾಹಕರಿಗೆ ಎಲ್ಲ ವಿಧವಾದ ಮಾವಿನ ಹಣ್ಣುಗಳು ಆಯಾ ಜಿಲ್ಲೆಗಳಲ್ಲೇ ಲಭ್ಯವಾಗಲು ಮೇಳ ಸಹಕಾರಿಯಾಗಲಿದೆ. ಮೇಳದಲ್ಲಿ ಮಾವಿನ ಮಾರಾಟ ಹಾಗೂ ಪ್ರದರ್ಶನವೂ ಇರುವುದರಿಂದ ಮಾವು ಪ್ರಿಯರ ಕುತೂಹಲ ಹೆಚ್ಚಲಿದೆ' ಎಂದರು.

15 ಲಕ್ಷ ಟನ್ ಮಾವು ಇಳುವರಿ ನಿರೀಕ್ಷೆ: 'ರಾಜ್ಯದಲ್ಲಿ ಮಾವು ಬೆಳೆ ಕಳೆದ ವರ್ಷ 5ರಿಂದ 7 ಲಕ್ಷ ಟನ್‌ಗಳಷ್ಟು ಇಳುವರಿ ಆಗಿತ್ತು. ಲಾಕ್‌ಡೌನ್‌ನಿಂದಲೂ ಮಾವಿಗೆ ಮಾರುಕಟ್ಟೆ ಕೊರತೆ ಎದುರಾಗಿತ್ತು. ಈ ಬಾರಿ ಉತ್ತಮ ಮಳೆ ಹಾಗೂ ರೋಗಗಳ ನಿಯಂತ್ರಣದ ಪರಿಣಾಮವಾಗಿ ಮಾವಿನ ಮರಗಳಲ್ಲಿ ಭಾರಿ ಹೂವುಗಳು ಬಿಟ್ಟಿವೆ. ಹಾಗಾಗಿ, ಈ ವರ್ಷ ಅಂದಾಜು 15 ಲಕ್ಷ ಟನ್‌ಗಳಷ್ಟು ಮಾವು ಇಳುವರಿ ನಿರೀಕ್ಷಿಸಲಾಗಿದೆ' ಎಂದು ಕೆ.ವಿ.ನಾಗರಾಜ್ ಮಾಹಿತಿ ನೀಡಿದರು. 'ರಾಜ್ಯದಲ್ಲಿ 1.62 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ಧಾರವಾಡ, ಹಾವೇರಿ, ಗದಗ ಹೆಚ್ಚು ಮಾವು ಬೆಳೆಯುವ ಜಿಲ್ಲೆಗಳು. ಮಾವು ಬೆಳೆಯುವ ಜಿಲ್ಲೆಗಳಲ್ಲಿ ಮಾವು ಮೇಳಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು' ಎಂದೂ ಹೇಳಿದರು.

ಪ್ರಜಾವಾಣಿ ವಿಶೇಷ

ಆನ್‌ಲೈನ್‌ನಲ್ಲಿ 100 ಟನ್ ಮಾವು ಮಾರಾಟ

'ರೈತರಿಂದ ಗ್ರಾಹಕರ ಮನೆ ಬಾಗಿಲಿಗೆ ಮಾವು ತಲುಪಿಸಲು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮವು 'ಕಾ*ಸಿರಿ ಮ್ಯಾಂಗೋಸ್' ಎಂಬ ಆನ್‌ಲೈನ್ ಪೋರ್ಟಲ್ ಆರಂಭಿಸಿತ್ತು. ಲಾಕ್‌ಡೌನ್ ಅವಧಿಯಲ್ಲಿ ಅಂಚೆ ಇಲಾಖೆಯ ಸಹಕಾರದಿಂದ 100 ಟನ್‌ಗಳಷ್ಟು ಮಾವಿನ ಹಣ್ಣನ್ನು ಬೆಂಗಳೂರಿನ ಮಾವು ಪ್ರಿಯರಿಗೆ ತಲುಪಿಸಲಾಯಿತು' ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಜಿ.ನಾಗರಾಜು ಮಾಹಿತಿ ನೀಡಿದರು.

'ನಗರದಲ್ಲಿ 36 ಸಾವಿರ ಮಂದಿ ಮಾವು ತರಿಸಿಕೊಂಡಿದ್ದರು. ಒಟ್ಟು 98 ಪಿನ್‌ಕೋಡ್‌ಗಳ ನಿಳಾಸಕ್ಕೆ ವಿವಿಧ ತಳಿಯ ಮಾವು ಪೂರೈಕೆಯಾಗಿತ್ತು. ಪೋರ್ಟಲ್‌ಗೆ ಗ್ರಾಹಕರಿಂದ ಉತ್ತಮ ಸ್ಪಂದನೆ ಸಿಕ್ಕಿದ್ದು, ಈ ಬಾರಿಯೂ ಆನ್‌ಲೈನ್ ಮಾರಾಟ ಇರಲಿದೆ. ಕೊರೊನಾ ನಿಯಂತ್ರಣಕ್ಕೆ ಬಂದರೆ, ಗ್ರಾಹಕರನ್ನು ಮಾವಿನ ತೋಟಗಳಿಗೆ ಕರದೊಯ್ಯುವ 'ಮಾವು ಪ್ರವಾಸ' ಏರ್ಪಡಿಸಲಾಗುವುದು' ಎಂದರು.

ಬಜೆಟ್‌ನಲ್ಲಿ ₹20 ಕೋಟಿಗೆ ಬೇಡಿಕೆ

'ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮಾವು ಮೇಳ ಆಯೋಜನೆ ಹಾಗೂ ಮಾವು

UASB
LIBRARY
Newspaper Clippings



Pg .3 Saturday 20-02-2021 Jai Kisan

Return to the roots

The purple yam and other tuber varieties are receiving special attention as part of an effort to popularise traditional, nutrient-rich crops, writes *Deepak Mangesh G R*



PURPLE YAM SOUP

Ingredients: Purple yam, black pepper, ginger, garlic, onion, coriander leaves, jeera, salt.

Recipe: Wash the yam with water and cut the tuber into small pieces. Boil the tuber pieces in a container and add a little salt while boiling. Filter this boiled water into another container. Add finely chopped onion, ginger, garlic, pepper, jeera and again boil nicely for up to 15-20 minutes.

Garnish the soup with the finely chopped coriander leaves.Your healthy and delicious purple yam soup is now ready to serve.

-MANGALA PRAKASH

A rare and forgotten tuber is slowly making an appearance in the markets in Karnataka. *Dioscorea alata* or purple yam is popular in Southeast Asian countries like the Philippines and Indonesia, where it is known as *ube*. It is an important crop in Melanesia, where it is grown for ceremonial purposes.

Closer home, the forest-dwelling communities around the Nagarahole forest call it *neeli kachalu*, while it is known as *konfal* in some regions of Maharashtra and *mukkizhangu* in Kerala, where it is sold for Rs 120 per kilo.

"Our elders, who migrated to the Wayanad region of Kerala, brought purple yam to the villages surrounding Nagarahole forest. We have been cultivating this tuber since then. We keep some for our own consumption, and take the rest to Kerala and sell it there," says Sannappa, a youth belonging to an indigenous community in H D Kote taluk.

G Krishna Prasad, the founder of an organic seed company, has been actively involved in promoting this unique edible root, which he received as a gift in 2008. "We had forgotten to plant it and during monsoon, the tuber sprouted by itself," he says.

He simply planted the root in a patch of land near his house. "We harvested a basket full of purple yam that year," he says.

"Not just purple yam, all tubers are easy to grow and has a lot of potential. Kerala has been smart and has done better in this respect," says Krishna Prasad.

Of late, the yam has also made an appearance in the "Roots and Tuber" melas in Mysuru and Joida, where it has piqued the interest of several people.

Up close, the colour of the tuber ranges from a vivid purple to a bright lavender, which it derives from the pigment anthocyanin.



Health food

Rich in starch, vitamins and anti-oxidants, the purple yam is also the go to health food. Its nutty sweet flavour means that the purple yam is used to prepare several sweet and savoury dishes.

The baked yam is just as soft as a potato.

"Ube is very popular in Filipino cuisine. *Ube halaya*, a creamy yam-based jam, one of the classic desserts of the Philippines, is quickly gaining traction all over the world. Ube chips, *ube pandasal* (cream buns) are also very popular," says Bhargavi Mahesh Sekar, a food enthusiast.



Purple yam vine

Bhargavi introduced the purple yam ice cream recipe to Suhas, a young entrepreneur in Dakshina Kannada who sells natural fruit ice creams.

"I was stunned by the colour when we ground the yam for the batter. We got attractive purple colour ice cream, which was one of the main attractions of this year's Mysuru Tuber Mela," Suhas says.

In Gujarat, the purple yam is used to prepare *undhiyo*, a mixed vegetable delicacy that includes raw banana, purple yam, 3-4 types of beans and brinjals.

Stir-fried purple yam chips are consumed during fasting in Maharashtra.

"Purple yam can be served as *palya* (vegetable side dish), can be used in a traditional South Indian sambar, biryani and desserts. Purple powder is used to impart a natural colour for rice, cakes, candy, and jams," says Seema Prasad, a food enthusiast.

Now, Sahaja Samruddha, an organic farmers collective is encouraging local farmers in H D Kote, Hunsur, Periyapatna taluks to grow this lesser-known tuber and is providing them with marketing assistance. They are also educating consumers about the health benefits of the purple yam through various initiatives.

To the fore

Roots and Tuber Melas, initiated by food and nature enthusiasts in Uttara Kannada's Joida taluk and later held regularly by various organisations over the past decade, have become a major platform to showcase the state's tuber diversity and popularise their use.

These resilient, nutrient-rich crops are not resource-intensive and adapt easily to diverse environmental and soil conditions and a variety of farming systems.

A Tuber Mela is being organised on February 27 and 28 in Dharwad.

More than 20 different groups, including members of the Jenu Kuruba, Siddi, Soliga, Irula and Kunbi communities, who are the custodians of the state's tuber diversity, are participating in the fair, along with their tuber collection.

20-02-2021
Dec Hrd Pg 07

20-02-2021
Sk Pg 04

20 ಸಾವಿರ ಕೋಟಿ ಕೃಷಿ ಸಾಲ ವಿತರಣೆ ಗುರಿ

ಸಂ.ಕ. ಸಮಾಚಾರ ಬೆಂಗಳೂರು

2021–22ನೇ ಸಾಲಿಗೆ 28 ಲಕ್ಷ ರೈತರಿಗೆ 20 ಸಾವಿರ ಕೋಟಿ ರೂ. ಅಲ್ಪಾವಧಿ, ಮಧ್ಯಮಾವಧಿ ಸೇರಿದಂತೆ ಬೆಳೆ ಸಾಲ ವಿತರಣೆ ಗುರಿಯನ್ನು ಇಟ್ಟುಕೊಳ್ಳಲಾಗಿದೆ.

ಈ ಕುರಿತು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದ್ದು, ಈ ಬಾರಿ 24.50 ಲಕ್ಷ ರೈತರಿಗೆ 15300 ಕೋಟಿ ರೂಪಾಯಿ ಸಾಲ ವಿತರಣೆ ಮಾಡುವ ಗುರಿಯನ್ನು ಹಾಕಿಕೊಳ್ಳಲಾಗಿತ್ತು. ಈವರೆಗೆ 22,02,931 ಲಕ್ಷ ರೈತರಿಗೆ 13739.28 ಕೋಟಿ ರೂಪಾಯಿ ಸಾಲ ನೀಡಲಾಗಿದೆ. ಮಾರ್ಚ್ 31ರೊಳಗೆ ನೂರಕ್ಕೆ ನೂರು ಗುರಿ ಮುಟ್ಟಲಾಗುವುದು ಎಂದ ಅವರು, 2021–22ನೇ ಸಾಲಿಗೆ 28 ಲಕ್ಷ ರೈತರಿಗೆ 20 ಸಾವಿರ ಕೋಟಿ ರೂ. ಅಲ್ಪಾವಧಿ, ಮಧ್ಯಮಾವಧಿ ಸೇರಿದಂತೆ ಬೆಳೆ ಸಾಲ ವಿತರಣೆ ಗುರಿಯನ್ನು ಮುಖ್ಯಮಂತ್ರಿಗಳು ಹಾಕಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಹೆಚ್ಚಿನ ಅನುದಾನಕ್ಕಾಗಿ ನಬಾರ್ಡ್‌ಗೆ ಸಹ ಮನವಿ ಸಲ್ಲಿಸಲಾಗಿದೆ. ಇದರಿಂದ ಹೆಚ್ಚಿನ ರೈತರಿಗೆ ಅನುಕೂಲವಾಗಲಿದೆ ಎಂದರು.



ಬೆಂಗಳೂರು, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಕೇಂದ್ರ ಸಹಕಾರಿ (ಜಿ.ಡಿ.ಸಿ.ಸಿ.) ಬ್ಯಾಂಕ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಸಚಿವ ಎಸ್.ಟಿ. ಸೋಮಶೇಖರ್ ಸಾಲ ವಿತರಿಸಿದರು. ಜಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಹನುಮಂತಪ್ಪ ನಿರ್ದೇಶಕ ಕೃಷ್ಣಮೂರ್ತಿ, ರಾಮನಗರ ಡಿಸಿಸಿ ಬ್ಯಾಂಕ್ ನಿರ್ದೇಶಕ ಮಂಜು ಮತ್ತಿತರರಿದ್ದರು.

21 ಡಿಸಿಸಿ ಬ್ಯಾಂಕ್ ಗಳು ಉತ್ತಮವಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದು, ಎಸ್ಸಿ ಬಡವರ ಬಂಧು, ಕಾಯಕ, ಎಸ್ಸಿ ಯೋಜನೆಗಳು ಹೆಚ್ಚಿಲ್ಲು ಜನರಿಗೆ ತಲುಪುವಂತಾಗಬೇಕು. ಈ ನಿಟ್ಟಿನಲ್ಲಿ ಎಲ್ಲಾ ಡಿಸಿಸಿ ಬ್ಯಾಂಕ್ ಗಳು ಕಾರ್ಯನಿರ್ವಹಣೆ ಮಾಡುತ್ತಿವೆ. ಬಡವರ ಬಂಧು ಯೋಜನೆಯಡಿ ತುಮಕೂರು ಡಿಸಿಸಿ ಬ್ಯಾಂಕ್ ಅತ್ಯುತ್ತಮವಾಗಿ ಸಾಲ ವಿತರಣೆ ಮಾಡುತ್ತಿದ್ದು, ಉಳಿದ ಬ್ಯಾಂಕ್ ಗಳು ಉತ್ತಮ ಪ್ರಗತಿಯನ್ನು ಸಾಧಿಸಿವೆ. ಗುಲ್ಬರ್ಗ ಡಿಸಿಸಿ ಬ್ಯಾಂಕ್ ಹೊರತುಪಡಿಸಿ ಉಳಿದ ಎಲ್ಲ ಬ್ಯಾಂಕ್‌ಗಳೂ ಸಹ ರೈತರಿಗೆ ಸಮರ್ಪಕವಾಗಿ ಸಾಲ ನೀಡುವ ಹಾಗೂ ಇನ್ನಿತರ ಯೋಜನೆಗಳನ್ನು ತಲುಪಿಸುವ ಕಾರ್ಯವನ್ನು ಮಾಡುತ್ತಿದ್ದು ಇದೀಗ ಗುಲ್ಬರ್ಗ ಡಿಸಿಸಿ ಬ್ಯಾಂಕ್ ಗೆ ಸುಮಾರು 200 ಕೋಟಿ ರೂಪಾಯಿ ಅನುದಾನವನ್ನು ನೀಡುವ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದೆ ಈ ಮೂಲಕ ರೈತರಿಗೆ ಯೋಜನೆ ತಲುಪಲು ಸಾಧ್ಯವಾಗುತ್ತದೆ ಎಂದರು.

ನಬಾರ್ಡ್ ನಿಂದ 1475 ಕೋಟಿ ರೂಪಾಯಿ ಅನುದಾನವನ್ನು ನೀಡಲಾಗಿದ್ದು, ಅದರಲ್ಲಿ ಬಂದ ಅನುದಾನದಲ್ಲಿ 85 ಕೋಟಿ ರೂ.ವನ್ನು ಇಲ್ಲಿನ ಬಿಡಿಸಿಸಿ ಬ್ಯಾಂಕ್ ಗೆ ನೀಡಿದ್ದೇವೆ. ಈ ಹಣದಲ್ಲಿ ಸೂಕ್ತ ಅರ್ಹ ಫಲಾನುಭವಿಗಳಿಗೆ ಸಾಲ ಗಳನ್ನು ನೀಡುವ ಮೂಲಕ ಎಲ್ಲರಿಗೂ ನೀರಿನ ಕಲ್ಪಿಸುವಂತೆ ನೋಡಿಕೊಳ್ಳಲಾಗುತ್ತಿದೆ ಎಂದು ಸಚಿವರು ಪ್ರಶಂಸೆ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ ಯೋಜನೆಯಡಿ ಜಾಲನೆ ನೀಡಲಾಗಿರುವ ಆರ್ಥಿಕ ಸ್ಪಂದನ ಕಾರ್ಯಕ್ರಮಕ್ಕೆ ಬೆಂಗಳೂರಿನಲ್ಲಿ ಇತ್ತೀಚೆಗಷ್ಟೆ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರು ಚಾಲನೆ ನೀಡಿದ್ದು, ಬೆಂಗಳೂರು ಮೈಸೂರು ಕಲಬುರಗಿ ಹಾಗೂ ಬೆಳಗಾವಿ ವಿಭಾಗ ಗಳ ಮೂಲಕ 39,300 ಕೋಟಿ ರೂಪಾಯಿ ಸಾಲ ವಿತರಣೆ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು. ಈ ಎಲ್ಲ ಕಡೆ ಈಗ ಎರಡನೇ ಹಂತದಲ್ಲಿ ಸಾಲ ವಿತರಣೆ ಮಾಡುತ್ತಿರುವುದು ಸಂತಸದ ವಿಚಾರವಾಗಿದೆ. ಬಿಡಿಸಿಸಿ ವತಿಯಿಂದ ಈ ಕಾರ್ಯ ಕ್ರಮದಲ್ಲಿಸುಮಾರು 45 ಕೋಟಿರೂಪಾಯಿ ಸಾಲವನ್ನು ನೀಡಲಾಗುತ್ತಿದೆ ಎಂದು ಸಚಿವರು ಅಭಿಪ್ರಾಯ ವ್ಯಕ್ತಪಡಿಸಿದರು.

ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಹನುಮಂತಪ್ಪ ನಿರ್ದೇಶಕರಾದ ಕೃಷ್ಣಮೂರ್ತಿ, ರಾಮನಗರ ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಮಂಜು ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.